


# ಮಿಂಚುವ ಮಣಿ ಮಂಚ!

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕು ಅನಾದಿಕಾಲದಿಂದಲೂ ಧಾರ್ಮಿಕ ಕ್ಷೇತ್ರ. ಇಲ್ಲಿನ ಗಚ್ಚಿನಮಠದಲ್ಲಿ ಪವಾಡ ಪುರುಷರಾದ ಗುರು ಬಸವೇಶ್ವರರು 15ನೇ ಶತಮಾನದಲ್ಲಿ ನೆಲೆಸಿ, ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ, ಅನೇಕ ಪವಾಡಗಳನ್ನು ಸೃಷ್ಟಿ ಮಾಡಿದ್ದಾರೆ. ಸಾಕಷ್ಟು ಮಂದಿ ಈ ಮಠಕ್ಕೆ ಬಂದು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತಾರೆ. ಮಠದಲ್ಲಿ ಗುರು ಬಸವೇಶ್ವರರು ಜೀವಂತ ಸಮಾಧಿಯಾಗಿದ್ದಾರೆ. ಮಠದೊಂದಿಗೆ ಅಲ್ಲಿ ಹೆಚ್ಚು ಆಕರ್ಷಣೆ ಗಿಟ್ಟಿಸಿರುವುದು ಮಣಿ ಮಂಚ. ಮೊಘಲ್ ಚಕ್ರವರ್ತಿ ಅಕ್ಬರ್, ಗುರು ಬಸವೇಶ್ವರ ಅವರಿಗೆ ಈ ಮಣಿ ಮಂಚವನ್ನು ಅರ್ಪಿಸಿದ್ದರು. ಮಠದ ಸಿಬ್ಬಂದಿ ಈ ಮಂಚವನ್ನು ಇನ್ನೂ ಸಾಕಷ್ಟು ಜತನದಿಂದ ಕಾಪಿಟ್ಟುಕೊಂಡಿದ್ದಾರೆ.

—ಮಧುಮತಿ ಅಭಿಷೇಕ್, ಚಿತ್ರದುರ್ಗ

# ಸೇಮ್ ಟು ಸೇಮ್ ಕ್ಯಾಲೆಂಡರ್!

ಇತಿಹಾಸ ಮರುಕಳಿಸುತ್ತದೆ ಅನ್ನುವುದು ಸತ್ಯ. ಅದು ಇಂದಲ್ಲ ನಾಳೆ ಮರುಕಳಿಸದಿರದು. ಈಗ ಅಂಥದ್ದೇ ಇತಿಹಾಸದ ಪುಟವೊಂದು ಮರುಕಳಿಸಿದೆ. ಅದುವೇ 1920ರ ಆಗಸ್ಟ್ ತಿಂಗಳ ಕ್ಯಾಲೆಂಡರ್.

1920ರ ಆಗಸ್ಟ್ ತಿಂಗಳ ಕ್ಯಾಲೆಂಡರ್ ಚಿತ್ರ ಹೀಗೆ ಕಣ್ಣಿಗೆ ಬಿತ್ತು. ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ನೂರ ಒಂದು (101) ವರ್ಷಗಳ ಹಿಂದೆ ಅಂದರೆ 1920ನೇ ಇಸವಿಯ ಆಗಸ್ಟ್ ತಿಂಗಳ ಕ್ಯಾಲೆಂಡರ್‌ಗೂ 2021ನೇ ಇಸವಿಯ ಆಗಸ್ಟ್ ತಿಂಗಳ ಕ್ಯಾಲೆಂಡರ್‌ಗೂ ಸಾಮ್ಯತೆ ಇರುವುದು ಕಂಡುಬಂತು.

ಎರಡನ್ನೂ ಹೋಲಿಕೆ ಮಾಡಿ ನೋಡಿದಾಗ ವಾರ, ದಿನಗಳಲ್ಲಿ ಯಾವುದೇ ವ್ಯತ್ಯಾಸವೂ ಕಾಣಲಿಲ್ಲ. ಅದೆಷ್ಟೋ ಸಾವಿರ ವರ್ಷಗಳಿಗೊಮ್ಮೆ ಇಂತಹ ಘಟನೆಗಳು ಸಂಭವಿಸುತ್ತವೆ ಎಂಬುದು ಕಾಲಜ್ಞಾನಿಗಳ ಅಭಿಪ್ರಾಯ. ಇಂದಲ್ಲ ನಾಳೆ ಇತಿಹಾಸ ಮರುಕಳಿಸುತ್ತದೆ ಅನ್ನೋದಕ್ಕೆ ಇದೇ ತಾಜಾ ಉದಾಹರಣೆ.

—ಪ. ನಾ. ಹಳ್ಳಿ ಹರೀಶ್ ಕುಮಾರ್, ತುಮಕೂರು













